ದಿನಾಂಕಃ- 11.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ. ಎಂ ಬಿ ಆರ್ ವಕೀಲರಿಂದಃ-

20. ಮದ್ದೂರು CHESCOM ಕಛೇರಿಯಲ್ಲಿ ಸಹಾಯಕ ಇಂಜಿನಿಯರ್ ಕೆಲಸ ಮಾಡುತ್ತಿದ್ದ ಎಂ.ಲಕ್ಷದೀಪ ಎನ್ನುವವರಿಂದ ಆರೋಪಿ ಗೋವಿಂದರಾಜು ರವರು ಸಹಾಯಕ ಇಂಜಿನಿಯರ್ ಪ್ರಭಾರವನ್ನು 14.10.2015 ರಂದು ವಹಿಸಿಕೊಂಡರು ಎನ್ನುವುದು ನನಗೆ ಗೊತ್ತಿಲ್ಲ.

21. ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ನಾನು ಉಪಯೋಗಿಸುತ್ತಿದ್ದ ವಿದ್ಯುತ್ ಸ್ಥಾವರ, ರತ್ನಮ್ಮ ಬಿನ್ ಚನ್ನೇಗೌಡ, ಪುಟ್ಟಸ್ವಾಮಿ ಬಿನ್ ಬೋರೆಗೌಡ ರವರ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಮೀಟರ್ ಗಳನ್ನು ಅಳವಡಿಸಿ ಗುರುತಿನ ನಂಬರುಗಳನ್ನು 01.09.2014, 31.03.2015 ಮತ್ತು 18.08.2014 ರಂದು ಕೊಟ್ಟಿರಬಹುದು. ನನಗೆ ಓದಲು ಅಥವಾ ಬರೆಯಲು ಬರುವುದಿಲ್ಲ. ನನ್ನ ತಂದೆಯ ಹೆಸರು ಬೊರೇಗೌಡ, ನನ್ನ ಅಜ್ಜನ ಹೆಸರು ರಂಗಿಕರೀಗೌಡ.

(ಈ ಹಂತದಲ್ಲಿ ಶ್ರೀ.ಎಂ ಬಿ ಆರ್ ವಕೀಲರು ಹಾಜರು ಪಡಿಸಿದ 28.12.2014 ನೇ ದಿನಾಂಕದಂದು ಮದ್ದೂರಿನ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (CHESCOM) ರವರು ಕೊಟ್ಟಿರುವ ದಾಖಲೆಯನ್ನು ಕೇವಲ ಗುರುತಿಗಾಗಿ ನಿಡಿ-1 ಎಂದು ಗುರುತಿಸಲಾಯಿತು.)

22. ಸುಮಾರು 2015-2016 ರಲ್ಲಿ ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ನಮ್ಮ ಕುಟುಂಬದವರು, ರತ್ನಮ್ಮ ಬಿನ್ ಚನ್ನೇಗೌಡ, ಪುಟ್ಟಸ್ವಾಮಿ ಬಿನ್ ಬೋರೆಗೌಡ ರವರ ಕುಟುಂಬದವರು ಮದ್ದೂರು CHESCOM ಕಛೇರಿಯಲ್ಲಿ ದಂಡದ ಹಣ ಕಟ್ಟಿರಬಹುದು.

23. ARF ಎಂದರೆ Application Registration Fee ಮಾಪಕ ಶುಲ್ಕ ದಂಡ ಎನ್ನುವುದು ನನಗೆ ಗೊತ್ತಿಲ್ಲ.

24. ನಾನು 2015-2016 ರಲ್ಲಿ ಯಾವ ಯಾವ ಬಾಬ್ತು ಮದ್ದೂರು CHESCOM ಕಛೇರಿಗೆ ಹಣ ಕಟ್ಟಿದ್ದೇನೆ ಎನ್ನುವುದನ್ನು ಹೇಳಲಾಗುವುದಿಲ್ಲ.

25. Transformer ಕೂರಿಸಲು CHESCOM ಕಛೇರಿಗೆ ಜಮೀನಿನ RTC ಮತ್ತು ಹಣ ಕಟ್ಟಿರುವ ರಶೀದಿಯನ್ನು ಕೊಡಬೇಕು. ನನ್ನ ಜಮೀನಿಗೆ ನೀರು ಹಾಯಿಸಲು Transformer ಕೂರಿಸಿಕೊಡಬೇಕು ಎಂದು ನಾನಾಗಲೀ ನನ್ನ ಕುಟುಂಬದವರಾಗಲೀ, ರತ್ನಮ್ಮನ ಕುಟುಂಬದವರಾಗಲೀ ಅರ್ಜಿ ಕೊಟ್ಟಿರಲಿಲ್ಲ. ಆದರೆ ಪುಟ್ಟಸ್ವಾಮಿ ರವರ ಮಗ ಲೋಕೇಶ ಅರ್ಜಿಯನ್ನು ಕೊಟ್ಟಿದ್ದನು. ಪುಟ್ಟಸ್ವಾಮಿ ರವರ ಮಗ ಲೋಕೇಶ ಯಾವ ಅಧಿಕಾರಿಯ ಕೈಗೆ ಅರ್ಜಿಯನ್ನು ಕೊಟ್ಟಿದ್ದನು ಎನ್ನುವುದು ನನಗೆ ಗೊತ್ತಿಲ್ಲ.

26. ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ನನ್ನ ಕುಟುಂಬದವರು ಉಪಯೋಗಿಸುತ್ತಿದ್ದ ವಿದ್ಯುತ್ ಸ್ಥಾವರ ಮತ್ತು ರತ್ನಮ್ಮನ ಕುಟುಂಬದವರು ಉಪಯೋಗಿಸುತ್ತಿದ್ದ ವಿದ್ಯುತ್ ಸ್ಥಾವರಕ್ಕೆ ಸಂಬಂಧಿಸಿದಂತೆ Transformer ಕೂರಿಸುವಂತೆ ನನ್ನ ಕುಟುಂಬದವರು ಅಥವಾ ರತ್ನಮ್ಮನ ಕುಟುಂಬದವರು ಪ್ರತ್ಯೇಕ ಅರ್ಜಿಗಳನ್ನು ಕೊಟ್ಟಿರಲಿಲ್ಲ.

27. ಲೋಕಾಯುಕ್ತ ಪೊಲೀಸರಿಗೆ ದೂರನ್ನು ಕೊಡುವಾಗ ಮದ್ದೂರು CHESCOM ಕಛೇರಿಗೆ ದಂಡದ ಹಣ ಕಟ್ಟಿರುವ ಕುರಿತು ರಶೀದಿಯ ಪ್ರತಿಯನ್ನು ಕೊಟ್ಟಿದ್ದೇನೆ. ಆದರೆ Transformer ಬೇಡಿಕೆ ಕುರಿತು ಪ್ರತ್ಯೇಕ ದಾಖಲೆಯನ್ನು ಕೊಟ್ಟಿಲ್ಲ.

28. ಕೆ ಎಂ ದೊಡ್ಡಿಯಲ್ಲಿ ಇರುವ ಸೈಬರ್ ಸೆಂಟರಿನಲ್ಲಿ ನಾನು ನಿಪಿ-1 ರಲ್ಲಿ ಗುರುತಿಸಿರುವ ದೂರನ್ನು ತಯಾರಿಸಿಕೊಂಡಿದ್ದೇನೆ. ನಾನು ದೂರನ್ನು ತಯಾರಿಸುವಾಗ ಸೈಬರ್ ಸೆಂಟರಿನವರಿಗೆ ಯಾವುದೇ ದಾಖಲೆಗಳನ್ನು ತೋರಿಸಿಲ್ಲ. ನಾನು ಇವತ್ತಿಗೆ ಸುಮಾರು 9 ವರುಷಗಳ ಹಿಂದೆ ಸೈಬರ್ ಸೆಂಟರಿನಲ್ಲಿ ತಯಾರಿಸಿಕೊಂಡ ದೂರಿನಲ್ಲಿ ಏನೇನು ಬರೆಸಿದ್ದೇನೆ ಎನ್ನುವುದನ್ನು ಈಗ ಹೇಳಲು ಆಗುವುದಿಲ್ಲ.

29. ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ದಾಖಲಿಸಲು ನಾನು ಮತ್ತು ಚಾಸಾ-4 ನೇ ಲೋಕೇಶ ಹೋಗಿದ್ದೆವು. ನಾನು ಮತ್ತು ಲೋಕೇಶ 2 ಸಾರಿ (2 ದಿನ)

ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ದಾಖಲಿಸಲು ಹೋಗಿದ್ದೆವು. ಮೊದಲನೇ ದಿನ ಹೋದಾಗ ಲೋಕಾಯುಕ್ತ ಪೊಲೀಸರು ಏಕಾಏಕಿ ದೂರು ಸ್ವೀಕರಿಸಲು ಆಗುವುದಿಲ್ಲ ಮತ್ತು ದೂರು ಸ್ವೀಕರಿಸಲು proof ಬೇಕು ಎಂದು ಹೇಳಿದರು. ಮೊದಲನೇ ಸಾರಿ ಲೋಕಾಯುಕ್ತ ಪೊಲೀಸ್ ಕಛೇರಿಯ ಒಳಗೆ ಹೋಗುವಾಗ ಲಿಖಿತ ದೂರನ್ನು ತೆಗೆದುಕೊಂಡು ಹೋಗಲಿಲ್ಲ. ಲೋಕಾಯುಕ್ತ ಪೊಲೀಸರು ನನಗೆ ಲಿಖಿತವಾಗಿ ದೂರು ಕೊಡುವಂತೆ ಮೊದಲನೇ ದಿನ ಹೇಳಲಿಲ್ಲ. ಮೊದಲನೇ ದಿನ ನಾನು ಹೇಳಿದ ವಿಚಾರಗಳನ್ನು ಲೋಕಾಯುಕ್ತ ಪೊಲೀಸರು ಬೆರಳಚ್ಚು ಮಾಡಿಸಲಿಲ್ಲ.

30. ಎರಡನೇ ದಿನ ನಾನು ಹೇಳಿದ ವಿಚಾರಗಳನ್ನು ಲೋಕಾಯುಕ್ತ ಪೊಲೀಸರು ಬೆರಳಚ್ಚು ಮಾಡಿಸಲಿಲ್ಲ. ಎರಡನೇ ದಿನ ನಾನು ಲೋಕಾಯುಕ್ತ ಪೊಲೀಸ್ ಕಛೇರಿಯ ಒಳಗೆ ಹೋದಾಗ ಯಾವುದೇ ದಾಖಲೆಗಳ ಮೇಲೆ ಸಹಿ ಮಾಡಲಿಲ್ಲ.

31. ನಾನು ದೂರು ದಾಖಲಿಸಿದ ನಂತರ ಲೋಕಾಯುಕ್ತ ಪೊಲೀಸರ ಕಜರಯ ಮೇರೆಗೆ 1 ಸಾರಿ ಲೋಕಾಯುಕ್ತ ಪೊಲೀಸ್ ಕಛೇರಿಗೆ ಹೋಗಿದ್ದೆನು. ಆ ಸಮಯದಲ್ಲಿ ಲೋಕಾಯುಕ್ತ ಪೊಲೀಸರು voice recorder ನಲ್ಲಿ record ಆಗಿದ್ದ ಸಂಭಾಷಣೆಯನ್ನು ಕೇಳಿಸಿದರು.

32. ಲೋಕಾಯುಕ್ತ ಪೊಲೀಸ್ ಕಛೇರಿಯಲ್ಲಿ ನಾನು ಹೇಳಿದ ವಿಚಾರಗಳನ್ನು ಬೆರಳಚ್ಚು ಮಾಡಿಸಿ ಪ್ರಿಂಟು ತೆಗೆಸಿ ನನ್ನ ಸಹಿಯನ್ನು ಮಾಡಿಸಿಕೊಂಡಿಲ್ಲ. ನಾನು ಲೋಕಾಯುಕ್ತ ಪೊಲೀಸ್ ಕಛೇರಿಯಲ್ಲಿ ದೂರಿನ ಮೇಲೆ ಸಹಿ ಮಾಡಿದ್ದನ್ನು ಹೊರತುಪಡಿಸಿ ಬೇರೆ ದಾಖಲೆಗಳ ಮೇಲೆ ಸಹಿ ಮಾಡಿಲ್ಲ.

33. ಆರೋಪಿ CHESCOM ಕಛೇರಿಯನ್ನು ಹೊರತುಪಡಿಸಿ ಬೇರೆ ಕಡೆ ಖಾಸಗಿ ಕಛೇರಿ ಇಟ್ಟುಕೊಂಡಿರಲಿಲ್ಲ ಎನ್ನುವುದು ಸರಿಯಲ್ಲ.

34. ಮದ್ದೂರಿನಲ್ಲಿ ನ್ಯಾಯಾಲಯದ ಕಟ್ಟಡಕ್ಕೆ ಹೋಗುವ ದಾರಿಯಲ್ಲಿ ಇರುವ ಅರಳಿಮರದ ಪಕ್ಕದಲ್ಲಿ ಇರುವ ಕಟ್ಟಡದ ಎರಡನೇ ಮಹಡಿಯಲ್ಲಿ ಒಂದು ಕೊಠಡಿಯಲ್ಲಿ ಆರೋಪಿ ಕಛೇರಿ ಮಾಡಿಕೊಂಡಿದ್ದನು.

35. ಮದ್ದೂರಿನಲ್ಲಿ ಕೆಮ್ಮಣ್ಣು ನಾಲೆಯ ಹತ್ತಿರ CHESCOM ಕಛೇರಿ ಇದೆ. ಮದ್ದೂರಿನಲ್ಲಿ CHESCOM ಕಛೇರಿಯಿಂದ ನ್ಯಾಯಾಲಯದ ಕಟ್ಟಡದ ಹತ್ತಿರ ಇರುವ ಅರಳಿ ಮರಕ್ಕೆ ಅರ್ಧ ಕಿಮಿ ಅಂತರ ಇದೆ.

36. 2015 ರಲ್ಲಿ ಮದ್ದೂರಿನಲ್ಲಿ ಕೆಮ್ಮಣ್ಣು ನಾಲೆಯ ಹತ್ತಿರ CHESCOM ಕಛೇರಿಯ ಕಟ್ಟಡ ಇರಲಿಲ್ಲ ಎನ್ನುವುದು ಸರಿಯಲ್ಲ. 2015 ರಲ್ಲಿ ಮದ್ದೂರಿನಲ್ಲಿ ನ್ಯಾಯಾಲಯದ ಕಟ್ಟಡದ ಹಿಂಭಾಗದಲ್ಲಿ ಇರುವ ಖಾಸಗಿ ಕಟ್ಟಡದಲ್ಲಿ CHESCOM ಕಛೇರಿ ನಡೆಯುತ್ತಿತ್ತು ಎನ್ನುವುದು ಸರಿಯಲ್ಲ.

37. ಆರೋಪಿ ಅರಳಿಮರದ ಹತ್ತಿರ ಇರುವ ಕಟ್ಟಡದ 2 ನೇ ಮಹಡಿಯಲ್ಲಿ ಇರುವ ಕೊಠಡಿಯ ಒಳಗೆ ನನ್ನನು ಕರೆಸಿಕೊಳ್ಳಲಿಲ್ಲ. ಕೊಠಡಿಯ ಮುಂಭಾಗದಲ್ಲಿ ನನ್ನನ್ನು ಮಾತನಾಡಿಸಿ ಕಳುಹಿಸಿದನು.

(ಈ ಹಂತದಲ್ಲಿ ಎಂ ಬಿ ಆರ್ ವಕೀಲರ ವಿನಂತಿಯ ಮೇರಗೆ ಸಾಕ್ಷಿದಾರರ ಮತ್ತು Special P.P. ರವರ ಒಪ್ಪಿಗೆ ಮೇರೆಗೆ 25.02.2026 ಕ್ಕೆ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.